<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.92/2020</u>

ದಿಃ 11.10.2021
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Dw-2

| | | |
|---|---|---|
| ಹೆಸರು | ಃ | ರೋಹಿತ್ |
| ತಂದೆಯ ಹೆಸರು | ಃ | ಲೇ. ಚಂದ್ರಶೇಖರ್ ಸಿ |
| ವಯಸ್ಸು | ಃ | 41 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಸಂತೆಮೊಗೇನಹಳ್ಳಿ,<br>ಚನ್ನಪಟ್ಟಣ ತಾಲ್ಲೂಕು |

<u>ಮುಖ್ಯ ವಿಚಾರಣೆಃ ಶ್ರೀ. ಬಿ.ಸಿ.ವಿ., ವಕೀಲರಿಂದಃ</u>

ನನಗೆ 1ನೇ ಆರೋಪಿ ಮತ್ತು ಗುಂಡಪ್ಪ ಗೊತ್ತು ಮತ್ತು ಅವರು ನಮ್ಮ ಪಕ್ಕದ ಊರಿನ ಗ್ರಾಮ ಪಂಚಾಯ್ತಿ ಸದಸ್ಯರು. ಚಾಸಾ.1ರವರು ನಮ್ಮ ಪಕ್ಕದ ಜಮೀನು ಖರೀದಿಸಿರುತ್ತಾರೆ. ಅವರ ಜಮೀನಿಗೆ ಸ್ವಲ್ಪ ಜನ ಭಾನುವಾರದಂದು ಬರುವುದು, ಹಾಡು ಹಾಕಿಕೊಂಡು ಗಲಾಟೆ ಮಾಡುವುದು, ಚರ್ಚ್ ಕಟ್ಟುತ್ತೇವೆಂದು ಗಲಾಟೆ ಮಾಡುತ್ತಿದ್ದರು. ಅದರಿಂದ ಅವರು ಮದ್ಯಪಾನ ಮಾಡಿ, ಕಿರುಚಾಡುವುದು ಮಾಡುತ್ತಿದ್ದು ನಮ್ಮ ಜಮೀನಲ್ಲಿ ನಾವು ಏನು ಬೇಕಾದರೂ ಮಾಡುತ್ತೇವೆಂದು ಹೇಳುತ್ತಿದ್ದರು. ಅದರಿಂದ ನಾವು 1ನೇ ಆರೋಪಿ ಮತ್ತು ಗುಂಡಪ್ಪನವರ ಬಳಿ ಈ ವಿಷಯಗಳನ್ನು ಹೇಳಿದೆವು. ಅವರು

ವಿಚಾರಿಸೋಣ ಎಂದು ಈ ಪ್ರಕರಣದ ದೂರು ನೀಡುವ ಹಿಂದಿನ ದಿನ ಸಂಜೆ 4.30 ರಿಂದ 5.00 ಗಂಟೆ ಸಮಯಕ್ಕೆ ಚಾಸಾ.1 ರವರ ಜಮೀನಿಗೆ ಹೋಗಿದ್ದು ಚಾಸಾ.1 ರವರೊಂದಿಗೆ ಸುಮಾರು 10-15 ಜನ ಇದ್ದರು. ನಾವು ಚಾಸಾ.1 ರವರನ್ನು ಕೇಳಿದಾಗ ಜಮೀನ್ನು ನಾವು ಖರೀದಿಸಿರುತ್ತೇವೆ, ನಾವು ಇಚ್ಛೆ ಬಂದಂತೆ ಮಾಡುತ್ತೇವೆಂದು ಬಾಯಿಗೆ ಬಂದಂತೆ ಮಾತನಾಡಿದರು. ನಂತರ ನಾವು ನಾಳೆ ಠಾಣೆಗೆ ಹೋಗಿ ದೂರು ನೀಡೋಣ, ಊರಿನಲ್ಲಿ ಮಾತನಾಡೋಣ ಎಂದು ಹೇಳಿದೆವು. ನಂತರ ಮಾರನೇ ದಿನ 1 ನೇ ಆರೋಪಿ ನನಗೆ ಸಿಕ್ಕಿ ಚಾಸಾ.1 ರವರೇ ಅವರ ಮೇಲೆ ಸುಳ್ಳು ದೂರು ನೀಡಿರುವುದಾಗಿ ಹೇಳಿದರು.

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ ಕಾಲಾವಕಾಶ ಕೋರಿದ್ದು ಅನುಮತಿಸಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.